# ಕಾರಿಗೂ ಬಂತು ಫೇಸ್‌ಬುಕ್!



ಉಪಾಹಾರ ಗೃಹಗಳಲ್ಲಿ, ಸಿನಿಮಾ ಮಂದಿರಗಳಲ್ಲಿ, ಕಚೇರಿಗಳಲ್ಲಿ ಸಾಮಾಜಿಕ ಜಾಲತಾಣ ಫೇಸ್‌ಬುಕ್ ಪರಿಶೀಲಿಸುವುದು ಹಲವರಿಗೆ ಹವ್ಯಾಸವಾಗಿ ಬಿಟ್ಟಿದೆ. 800 ದಶಲಕ್ಷಕ್ಕೂ ಅಧಿಕ ಮಂದಿ ಇರುವ ಫೇಸ್‌ಬುಕ್ ಬಳಕೆದಾರರಿಗೆ ಈಗ ಸಿಹಿ ಸುದ್ದಿ– ಇನ್ನು ಮುಂದೆ ಕಾರ್‌ನಕ್ಕೂ ಫೇಸ್‌ಬುಕ್ ತಾಣಕ್ಕೆ ಭೇಟಿ ನೀಡಬಹುದು.

ಸದ್ಯಕ್ಕೆ ಅಮೆರಿಕದ ಮರ್ಸಿಡಿಸ್– ಬೆಂಜ್ ಕಾರುಗಳಲ್ಲಿ ಈ ಸೇವೆಯ ಹೊಸ ಆವೃತ್ತಿಯನ್ನು ಅಳವಡಿಸಲಾಗಿದೆ. ವಾಹನದೊಳಗೆ ಅಳವಡಿಸುವ ಹೊಸ ರೀತಿಯ ಟೆಲೆಮ್ಯಾಟಿಕ್ ವ್ಯವಸ್ಥೆಯಿದು. ಆದರೆ ರಸ್ತೆಯಲ್ಲಿ ವಾಹನಗಳಲ್ಲಿ ಸಾಗುವಾಗ ಸಾಮಾಜಿಕ ಜಾಲತಾಣಗಳಿಗೆ ಭೇಟಿ ನೀಡುವುದು ವೈಯಕ್ತಿಕ ಕಂಪ್ಯೂಟರ್ ಅಥವಾ ಸ್ಮಾರ್ಟ್‌ಫೋನ್‌ನಲ್ಲಿ ಇಂತಹ ತಾಣಗಳನ್ನು ಪರಿಶೀಲಿಸುವಷ್ಟು ಸುಲಭವಲ್ಲ. ಡೈಮ್ಲರ್ ಎಜಿ ಮರ್ಸಿಡಿಸ್‌ನಲ್ಲಿ ಅಳವಡಿಸಲಾಗಿರುವ ಈ 'ಇನ್–ಬಿಲ್ಟ್' ಫೇಸ್‌ಬುಕ್ ವ್ಯವಸ್ಥೆಯಲ್ಲಿ ಸ್ನೇಹಿತರಿರುವ ಸ್ಥಳ ಮತ್ತು ಕೆಲವೊಂದು ವ್ಯವಹಾರಗಳಿಗೆ ಅನುಕೂಲವಾಗುವ ಅಪ್ಲಿಕೇಶನ್‌ಗಳನ್ನು ನೀಡಲಾಗಿದೆ.

ಅಂತರ್ಜಾಲ ಸಂಪರ್ಕ ಮತ್ತು ಮಾನಿಟರ್ ಪರದೆ ಎಲ್ಲೆಲ್ಲಿ ಲಭ್ಯವೋ ಅಲ್ಲೆಲ್ಲಾ ಸಾಮಾಜಿಕ ಜಾಲತಾಣದ ವೀಕ್ಷಣೆಗೆ ಅವಕಾಶ ಕಲ್ಪಿಸುವುದು ಫೇಸ್‌ಬುಕ್ ಗುರಿ. ಈಗಾಗಲೇ ಹಲವಾರು ಕಾರು ತಯಾರಿಕಾ ಕಂಪೆನಿಗಳು ಹೊಸ ಮಾದರಿ ಕಾರುಗಳಲ್ಲಿ ಈ ಮಾನಿಟರ್‌ಗಳನ್ನು ಅಳವಡಿಸಿವೆ. ಚಾಲಕರು ಇಂತಹ ಮಾನಿಟರ್‌ಗಳಲ್ಲಿ ಫೇಸ್ ಬುಕ್ ವೀಕ್ಷಣೆ ಮಾಡಬಹುದು.

'ಕಾರುಗಳಲ್ಲಿ ಫೇಸ್‌ಬುಕ್ ವೀಕ್ಷಣೆಯಿಂದ ಆಗುವ ಲಾಭವೆಂದರೆ ಜಿಪಿಎಸ್ ನಿರ್ದೇಶನ ವ್ಯವಸ್ಥೆ ಮೂಲಕ ಸಮೀಪ ಇರುವ ಸ್ನೇಹಿತರ ಬಗ್ಗೆ ಅರಿತುಕೊಳ್ಳುವುದು. ಇದು ಹಲವರಲ್ಲಿ ಕುತೂಹಲ ಮೂಡಿಸುವುದು ಸಹಜ' ಎಂಬುದು ಫೇಸ್‌ಬುಕ್ ಉಪಾಧ್ಯಕ್ಷ ಡ್ಯಾನ್ ರೋಸ್ ಅಂಬೋಣ.

ಚಲಿಸುವ ಕಾರಿನಲ್ಲಿ ಇಂತಹದ್ದನ್ನೆಲ್ಲಾ ವೀಕ್ಷಿಸುತ್ತಿದ್ದರೆ ಚಾಲಕನ ಗಮನ ಬೇರೆಡೆ ಸೆಳೆದಂತಾಗುವುದಿಲ್ಲವೇ? ಕಾರಿನಲ್ಲಿ ಜಿಪಿಎಸ್ ಅಥವಾ ರೇಡಿಯೊ ಇರುವುದಿಲ್ಲವೇ, ಹಾಗೆಯೇ ಇದು ಕೂಡಾ. ಫೇಸ್‌ಬುಕ್‌ನಲ್ಲಿ ಬರೆಯಲು ಯತ್ನಿಸಿದರೆ ಕಾರು ಚಾಲನೆಯಲ್ಲಿದ್ದಾಗ ಸಾಧ್ಯವಾಗದಂತೆ ತಂತ್ರಜ್ಞಾನ ರೂಪಿಸಲಾಗಿದೆ. ಕಾರು ಚಾಲನೆ ಮಾಡುವ ಮೊದಲೇ ಬರೆದಿಟ್ಟಿರುವ ಸಂದೇಶಗಳನ್ನು ಪೋಸ್ಟ್ ಮಾಡಬಹುದು. ಜೊತೆಗೆ ಸಮೀಪ ಇರುವ ಅವರ ಸ್ನೇಹಿತರು ಇಷ್ಟಪಡುವ ಹೋಟೆಲ್‌ಗಳ ಪಟ್ಟಿ ಕೂಡಾ ಫೇಸ್‌ಬುಕ್‌ನಲ್ಲಿ ಕಾಣಿಸಿಕೊಳ್ಳುತ್ತದೆ. ಆದರೆ ಇದರಲ್ಲಿ ಸಾಮಾಜಿಕ ಗೇಮ್ 'ಝಿಂಗಾ' ಆಡಲು ಸಾಧ್ಯವಿಲ್ಲ. ಮರ್ಸಿಡಿಸ್‌ನಲ್ಲಿ ಅಳವಡಿಸಲಾಗಿರುವ ಫೇಸ್‌ಬುಕ್ ಆವೃತ್ತಿ ಬೇರೆ ಕಂಪೆನಿಯ ಅಪ್ಲಿಕೇಶನ್‌ಗಳನ್ನು ಬೆಂಬಲಿಸುವುದಿಲ್ಲ.

# ಮಾತನಾಡದ ಆಪ್ತ ಕಾರ್ಯದರ್ಶಿ

ಐಪ್ಯಾಡ್, ಐಫೋನ್ ದಿಗ್ಗಜ ಆ್ಯಪಲ್ ಬಳಕೆದಾರರ ಕಲ್ಪನೆ, ಧ್ವನಿಯನ್ನು ಮುದ್ರಿತ ರೂಪಕ್ಕೆ ಇಳಿಸುವ 'ಸಿರಿ' ಮೂಲಕ ಈಗ ಹೊಸ ಅವತಾರದಲ್ಲಿ ಮಾರುಕಟ್ಟೆಗೆ ಲಗ್ಗೆ ಹಾಕಲು ಸಜ್ಜಾಗಿದೆ.

ಹಿಂದೊಮ್ಮೆ ದೋಷಪೂರಿತ ಎಂದು ಅವಜ್ಞೆಗೆ ಒಳಗಾಗಿದ್ದ ಇಂಪಾದ, ಧ್ವನಿ ನಿಯಂತ್ರಿತ ತಂತ್ರಜ್ಞಾನವು ಇತ್ತೀಚಿನ ಐಫೋನ್– 4ಎಸ್ ಭಾರಿ ಯಶಸ್ಸಿಗೆ ಕಾರಣ. 'ಸಿರಿ' ಬಾಯಲ್ಲಿ ಹೇಳಿದ ನಿರ್ದೇಶನಗಳನ್ನು ಮುದ್ರಿತ ರೂಪಕ್ಕೆ ಇಳಿಸುತ್ತದೆ. ಬಾಸ್‌ನ ನಿಶ್ಚಿತ ಕಾರ್ಯಕ್ರಮಗಳನ್ನು ಕ್ಯಾಲೆಂಡರ್‌ನಲ್ಲಿ ಗುರುತು ಮಾಡುತ್ತದೆ. ಸಾಮಾನ್ಯ ಜ್ಞಾನ ಪ್ರಶ್ನೆಗಳಿಗೆ ಉತ್ತರಿಸುವ ಸಾಮರ್ಥ್ಯವಿದೆ. ಆದರೆ ತಪ್ಪಾಗಿ ಕೇಳಿಸಿಕೊಂಡ ನಿರ್ದೇಶನಗಳನ್ನೂ ಮುದ್ರಿತ ರೂಪಕ್ಕೆ ಇಳಿಸಿ, ಕೆಲವು ಶಬ್ದಗಳ ಸಂಪೂರ್ಣ ವಿವರಣೆ ನೀಡಿ ಬೈಸಿಕೊಂಡು ಮೂಲೆಗುಂಪಾಗಿತ್ತು. ಜೊತೆಗೆ ಬಲು ನಿಧಾನಿ ಎಂಬ ಆರೋಪವಿತ್ತು.

ಆದರೆ ಈಗ ಗೂಗ್ಲ್, ಇಂಟರ್‌ನ್ಯಾಷನಲ್ ಮತ್ತು ಮೈಕ್ರೋಸಾಫ್ಟ್ ಕಾರ್ಪೊರೇಶನ್ ಸಿರಿಯನ್ನು ಮತ್ತೆ ಜನಪ್ರಿಯಗೊಳಿಸಲು ಹೊರಟಿವೆ. ಬೇರೆ ಎಲ್ಲಾ ಕಂಪೆನಿಗಳು ಮಾತನಾಡುವುದಕ್ಕೆ ಅಂದರೆ ಮೊಬೈಲ್ ಫೋನ್‌ಗೆ ಆದ್ಯತೆ ನೀಡಿ ಆ ವಲಯಕ್ಕೇ ಬಂಡವಾಳ ಸುರಿಯುತ್ತಿವೆ. ಹೀಗಾಗಿ ತಮ್ಮ ಕಂಪೆನಿ ಹೂಡಿಕೆದಾರರು, ಬಳಕೆದಾರರು ಹಾಗೂ ಮಾಧ್ಯಮದವರ ಗಮನ ಸೆಳೆಯಲು ಧ್ವನಿಗೆ ಹೆಚ್ಚು ಮಹತ್ವ ನೀಡುತ್ತಿದೆ ಎಂದು ಧ್ವನಿ ಗುರುತಿಸುವ ತಂತ್ರಜ್ಞಾನ ಕಂಪೆನಿ 'ನೌನ್ಸ್' ಪ್ರಕಟಿಸಿದೆ. ಧ್ವನಿ ನಿರ್ದೇಶನ ವ್ಯವಸ್ಥೆಯಿರುವ ಮೊಬೈಲ್ ಫೋನ್, ಕಂಪ್ಯೂಟರ್‌ನಿಂದ ಟೈಪ್ ಮಾಡುವ, ವೆಬ್ ಪರಿಶೀಲಿಸುವ ಸಮಯ ಉಳಿತಾಯವಾಗುತ್ತದೆ. ಇಂಟೆಲ್ (ಡೆಲ್ ಮತ್ತು ಎಚ್‌ಪಿ) ತನ್ನ ಅಲ್ಟ್ರಾಬುಕ್ ಲ್ಯಾಪ್‌ಟಾಪ್‌ನಲ್ಲಿ ಈ ತಂತ್ರಜ್ಞಾನ ಬಳಸಲಿದೆ. ಗೂಗ್ಲ್‌ನ ಆ್ಯಂಡ್ರಾಯ್ಡ್ ಕಾರ್ಯನಿರ್ವಹಣಾ ವ್ಯವಸ್ಥೆಯನ್ನು ಆಧರಿಸಿರುವ ಫೋನ್‌ಗಳಲ್ಲೂ ಇದನ್ನು ಬಳಸುವ ಇರಾದೆ ನೌನ್ಸ್‌ಗೆ.

ಇತ್ತೀಚೆಗೆ ಮಾರುಕಟ್ಟೆಗೆ ಬಂದ ಮೈಕ್ರೊಸಾಫ್ಟ್ ವಿಂಡೋಸ್ ಆಧಾರಿತ ಸ್ಮಾರ್ಟ್‌ಫೋನ್‌ಗಳಲ್ಲಿ 'ಆಸ್ಕ್ ಜಿಗ್ಗಿ' ತಂತ್ರಜ್ಞಾನ ಅಳವಡಿಸಲಾಗಿದ್ದು ಇದು ಬಾಯ್ಮಾತಿನ ನಿರ್ದೇಶನದ ಮೇರೆಗೆ ಫೇಸ್‌ಬುಕ್, ಟ್ವಿಟರ್ ಖಾತೆಗಳನ್ನು ಪರಿಷ್ಕರಿಸುತ್ತದೆ.

# ಆಪದ್ಬಾಂಧವ ಸ್ಮಾರ್ಟ್‌ಫೋನ್




ಕಾಣೆಯಾದ ವ್ಯಕ್ತಿಗಳಿರುವ ಜಾಗವನ್ನು ಕರಾರುವಾಕ್ಕಾಗಿ ತಿಳಿದುಕೊಳ್ಳಬೇಕೇ? ಪೌಷ್ಟಿಕಾಂಶದ ಕೊರತೆಯಿಂದ ಬಳಲುವವರನ್ನು ಗುರುತಿಸಬೇಕೇ? ಪ್ರಕೃತಿ ವಿಕೋಪದ ಸಂದರ್ಭದಲ್ಲಿ ನಿವಾಸಿಗಳನ್ನು ಸುರಕ್ಷಿತ ಜಾಗಕ್ಕೆ ಸೇರಿಸಬೇಕೇ? ಇವನ್ನೆಲ್ಲಾ ಒಂದು ಸ್ಮಾರ್ಟ್‌ಫೋನ್ ಮಾಡಬಲ್ಲದು. ಇಂಗ್ಲೆಂಡ್‌ನ ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯದ ಗೆವಿನ್ ಬ್ರೌನ್ ಮತ್ತವರ ತಂಡದವರು ಈ 'ಪುನರ್ಮಿಲನ' ಸ್ಮಾರ್ಟ್‌ಫೋನ್ ತಂತ್ರಜ್ಞಾನವನ್ನು ಕಂಡುಹಿಡಿದಿದ್ದಾರೆ.

ಪ್ರಕೃತಿ ವಿಕೋಪದ ಸಂದರ್ಭದಲ್ಲಿ ತಮ್ಮ ಬಂಧುಗಳನ್ನು ಕಳೆದುಕೊಂಡವರ ವಿವರಗಳನ್ನು ಈ ಫೋನ್‌ನಲ್ಲಿ ಸಂಗ್ರಹಿಸಿದರೆ ಎಲ್ಲಾ ಸಾಮಾಜಿಕ ಜಾಲತಾಣಗಳಿಗೆ ಇದು ವಿವರ ಕಳಿಸುತ್ತದೆ. ಸುಲಭವಾಗಿ ಡೌನ್‌ಲೋಡ್ ಮಾಡಬಹುದು. ಇದು ಎಲ್ಲಾ ಕಡೆ ಇರುವ ವಿಕೋಪ ನಿಯಂತ್ರಣ ಕಾರ್ಯಕರ್ತರು, ಸ್ವಯಂಸೇವಕರಿಗೆ ತಲುಪಿಸುವ ಕೆಲಸ ಮಾಡುತ್ತದೆ. ಜೊತೆಗೆ ಸುರಕ್ಷಿತ ವಲಯ ಗುರುತಿಸುವ ಕೆಲಸ ಮಾಡುತ್ತದೆ. ಇದಲ್ಲದೇ ಪೌಷ್ಟಿಕಾಂಶ ಕೊರತೆಯಿಂದ ಬಳಲುವ ಶಿಶುಗಳಲ್ಲಿ ಇದರ ಮಟ್ಟ ಪತ್ತೆ ಹಚ್ಚಿ ಎಷ್ಟು ಪ್ರಮಾಣದಲ್ಲಿ ಪೌಷ್ಟಿಕಾಂಶ ನೀಡಬೇಕು ಎಂಬುದನ್ನು ತಿಳಿಸುವ ಕೆಲಸವನ್ನೂ ಮಾಡುತ್ತದೆ.

■ ಎಸ್.ತುಂಬೆ